O.S. 264/2013
D.W.5

**<u>ಸಾಕ್ಷಿಯನ್ನು ದಿನಾಂಕಃ 11-04-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲು ವಾದಿ ಪರ ವಕೀಲರಿಂದಃ</u>**

ನನ್ನ ತಂದೆಯ ಹೆಸರು ಚಂದ್ರಶೇಖರಯ್ಯ ಎಂದರೆ ಸರಿ. ನನ್ನ ತಾಯಿಯ ಹೆಸರು ಗಿರಿಜಮ್ಮ ಎಂದರೆ ಸರಿ. ಸದರಿ ಚಂದ್ರಶೇಖರಯ್ಯ ಮತ್ತು ಗಿರಿಜಮ್ಮ ಇವರಿಗೆ 1 ನೇ ಪ್ರತಿವಾದಿ ಒಬ್ಬನೇ ಮಗ ಎಂದರೆ ಸರಿ. ಅದೇ ರೀತಿ ಭಾಗ್ಯಮ್ಮ, ಮಂಜಮ್ಮ ಮತ್ತು ಮೈತ್ರಮ್ಮ ಇವರು ಹೆಣ್ಣುಮಕ್ಕಳು ಎಂದರೆ ಸರಿ. 1 ನೇ ವಾದಿ ಶಿವಲೀಲಾ ನನ್ನ ಅಣ್ಣನ ಮಗಳು ಎಂದರೆ ಸರಿ. 2 ನೇ ವಾದಿ ಪಾರ್ವತಮ್ಮ ನನ್ನ ಅಣ್ಣನ ಹೆಂಡತಿ ಎಂದರೆ ಸರಿ. ನನ್ನ ಅಣ್ಣ ವೀರಬಸಯ್ಯ ಹಾಗೂ 2 ನೇ ವಾದಿ ಪಾರ್ವತಮ್ಮನ ವಿವಾಹವು 1985 ನೇ ಇಸವಿಯಲ್ಲಿ ಆಯಿತು ಎಂದರೆ ಸರಿ. ವಿವಾಹದ ನಂತರ 4 ವರ್ಷಗಳ ಕಾಲ ಅವರ ವೈವಾಹಿಕ ಜೀವನ ಚೆನ್ನಾಗಿತ್ತು ಎಂದರೆ ಸರಿ. ನಾಲ್ಕು ವರ್ಷಗಳ ನಂತರ ನನ್ನ ಅಣ್ಣ ವಾದಿಯರನ್ನು ತೊರೆದು ಹೋದನು ಎಂದರೆ ಸರಿ. ವಾದಿಯರ ಪಾಲನೆ ಪೋಷಣೆ ಮಾಡದೆ ನನ್ನ ಅಣ್ಣನು ಸಂಗೂರಿನ ಶುಗರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದನು ಎಂದರೆ ಸರಿ.

O.S. 264/2013
D.W.5

ನಂತರ ನನ್ನ ಅಣ್ಣನು ಅಂಚೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದನು ಎಂದರೆ ಸರಿ. ಕಳೆದ 30-35 ವರ್ಷಗಳಿಂದ ನನ್ನ ಅಣ್ಣ ವಾದಿಯರೊಂದಿಗೆ ವಾಸವಿರುದಿಲ್ಲ ಎಂದರೆ ಸರಿ. ನನ್ನ ಅಣ್ಣ ವಾದಿಯರನ್ನು ತಿರಸ್ಕರಿಸಿದ ಕಾರಣ ಊರಿನಲ್ಲಿ ಪಂಚಾಯಿತಿ ಆಗಿರುತ್ತದೆ ಎಂದರೆ ಸರಿ. ಸದರಿ ಪಂಚಾಯಿತಿಯಲ್ಲಿ ವಾದಿಯರಿಗೆ ಒಂದು ಜಮೀನು ಹಾಗೂ ಮನೆಯನ್ನು ನೀಡಲಾಗಿರುತ್ತದೆ ಎಂದರೆ ಸರಿ. ಅಂದಿನಿಂದ ಇಂದಿನವರೆಗೂ ವಾದಿಯರು ಸದರಿ ಜಮೀನನ್ನು ಸ್ವಾಧೀನದಲ್ಲಿದ್ದು, ಸಾಗುವಳಿ ಮಾಡುತ್ತಿರುವರು ಎಂದರೆ ಸರಿ. ನಾವು ಮೂರು ಜನ ಸಹೋದರಿಯರು ವಿವಾಹದ ನಂತರ ಗಂಡನ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ವಾದಿಯರಿಗೆ ಭಾಗ ಕೊಟ್ಟಿರುವ ವಿಚಾರ ನನಗೆ ಮೊದಲಿನಿಂದಲೂ ಗೊತ್ತಿದ್ದರೂ ಸಹಿತ ಈಗ ಪುನಃ ಭಾಗ ಬೇಕು ಎಂದು ಸುಳ್ಳಾಗಿ ಕ್ಲಮ್ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ನನಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

11-04-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**